## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 330(405) |
| 02 | ಸದಸ್ಯರ ಹೆಸರು | ಶ್ರೀ ಕೇಶವ ಪ್ರಸಾದ್ ಎಸ್ ವಿಧಾನ ಪರಿಷತ್ತಿನ ಸದಸ್ಯರು. |
| 03 | ವಿಷಯ | ರಾಜ್ಯದಲ್ಲಿ ಕಾಡಂಚಿನಲ್ಲಿ ವಾಸಿಸುವ ಜನಾಂಗದ ಹಾಡಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಕುರಿತು |
| 04 | ಉತ್ತರಿಸಬೇಕಾದ ದಿನಾಂಕ | 19/08/2026 |
| 05 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಅ.ನಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಂದಾಯ ಗ್ರಾಮ ಮಾಡಲು ಇರುವ ಮಾನದಂಡಗಳು ಯಾವುವು: (ಸಂಪೂರ್ಣ ಮಾಹಿತಿ ನೀಡುವುದು) | ಕಂದಾಯ ಗ್ರಾಮಗಳನ್ನಾಗಿ ಮಾಡಲು ಅನುಸರಿಸುವ ಕಾಯ್ದೆ, ನಿಯಮಗಳು ಮತ್ತು ಮಾನದಂಡಗಳ ವಿವರ ಈ ಕೆಳಕಂಡಂತೆ ಇರುತ್ತದೆ.<br><br>1.ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 94(ಡಿ) ಹಾಗೂ ಕರ್ನಾಟಕ ಭೂಕಂದಾಯ ನಿಯಮಗಳು 1966 ರ ನಿಯಮ 108(ಝುಡ್)<br><br>2. ಕರ್ನಾಟಕ ಭೂಕಂದಾಯ ಕಾಯ್ದೆ 1961ರ ಕಲಂ 38(ಎ) ಹಾಗೂ ಕರ್ನಾಟಕ ಭೂಸುಧಾರಣಾ ನಿಯಮಗಳು 1974 ರ ನಿಯಮ 9(ಸಿ)<br><br>3.ಸರ್ಕಾರದ ಆದೇಶ ಸಂಖ್ಯೆ: ಕಂಇ/01/ಭೂದಾವು/2016, ಬೆಂಗಳೂರು ದಿನಾಂಕ:01-03-2016ರ<br><br>4.ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ/20/ಸಿಸಿಆರ್ ವಿ/2019 ದಿನಾಂಕ:15-10-2019 |
| ಆ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಹಳ್ಳಿಗಳನ್ನು ಅಥವಾ ಮಜಿರೆಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲಾಗಿದೆ: (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಕಂದಾಯ ಗ್ರಾಮಗಳನ್ನಾಗಿ ಮಾಡಿದ ಹಳ್ಳಿಗಳ ಅಥವಾ ಮಜಿರೆಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಇ) | ಸ್ವಾತಂತ್ರ್ಯ ಪೂರ್ವದಿಂದಲೂ ಹೈನುಗಾರಿಕೆಯನ್ನು ಮಾಡಿಕೊಂಡು ಕಾಡಿನಲ್ಲಿ ಮತ್ತು ಕಾಡಿಂಚಿನಲ್ಲಿ ವಾಸಿಸುವ ಹಿಂದುಳಿದ ವರ್ಗದ ಜನಾಂಗಗಳ ಹಾಡಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ: | ಸುಮಾರು 170 ಕ್ಕಿಂತಲೂ ಹೆಚ್ಚು ಅರಣ್ಯ ಪ್ರದೇಶಗಳಲ್ಲಿ ದಾಖಲೆರಹಿತ ಜನವಸತಿ ಪ್ರದೇಶಗಳನ್ನು ಗುರುತಿಸಲಾಗಿದ್ದು, ಸದರಿ ಜನವಸತಿ ಪ್ರದೇಶಗಳ ಬಗ್ಗೆ ತುರ್ತಾಗಿ ಕ್ರಮವಹಿಸಬೇಕಾದ ಪ್ರಯುಕ್ತ ಅರಣ್ಯ ಇಲಾಖೆಯ ಸಹಮತಿ / ಅಭಿಪ್ರಾಯದ ಅವಶ್ಯಕತೆ ಇರುತ್ತದೆ.<br>ಅರಣ್ಯ ಪ್ರದೇಶಗಳಲ್ಲಿ ನೆಲೆಗೊಂಡಿರುವ ದಾಖಲೆರಹಿತ ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಅಲ್ಲಿಯ ನಿವಾಸಿಗಳಿಗೆ ವಾಸದ ಹಕ್ಕು ದಾಖಲೆ ನೀಡುವ ಕುರಿತಂತೆ ಕಂದಾಯ ಗ್ರಾಮಗಳ ರಚನಾ ಕೋಶದಿಂದ (ಕಂದಾಯ ಇಲಾಖೆಯಿಂದ) ಪತ್ರ ಸಂಖ್ಯೆ: ಕಂಇ 23 ಸಿಸಿಆರ್‌ವಿ 2019, ದಿನಾಂಕ: 04-12-2019 ರನ್ವಯ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ ಬೆಂಗಳೂರು ರವರಿಗೆ ಅರಣ್ಯ ಪ್ರದೇಶಗಳಲ್ಲಿ ನೆಲೆಗೊಂಡಿರುವ ದಾಖಲೆರಹಿತ ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿ ಅಲ್ಲಿಯ ನಿವಾಸಿಗಳಿಗೆ ವಾಸದ ಹಕ್ಕು ದಾಖಲೆ ನೀಡುವ ಕುರಿತು ಸಿದ್ಧಪಡಿಸಿರುವ ಕರಡು ಪರಿಷ್ಕೃತ ಸುತ್ತೋಲೆ (ಸ.ಕ.ಇ ಕರಡು) ಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯ ಸಹಮತಿ / ಅಭಿಪ್ರಾಯ ಮತ್ತು ಸಲಹೆ ಸೂಚನೆಗಳನ್ನು ಸಲ್ಲಿಸಲು ಕೋರಲಾಗಿರುತ್ತದೆ. ಸದರಿ ಇಲಾಖೆಯಿಂದ ಅಭಿಪ್ರಾಯ ನಿರೀಕ್ಷಣೆಯಲ್ಲಿರುತ್ತದೆ. |
| ಈ) | ಈಗಾಗಲೇ ನೂರಾರು ಹಳ್ಳಿಗಳು ಕಾಡಿನಲ್ಲಿ ಇರುವುದರಿಂದ ಇವರಿಗೆ ಶಾಶ್ವತ ಮನೆ ಕಟ್ಟಿಕೊಳ್ಳಲು ಅನುಕೂಲವಾಗುವಂತೆ ಇವರ ಗ್ರಾಮಗಳನ್ನು ಯಾವ ರೀತಿಯಾಗಿ ಕಂದಾಯ ಗ್ರಾಮಗಳನ್ನಾಗಿ ಮಾಡಬಹುದು: (ವಿವರ ನೀಡುವುದು) | |
| ಉ) | ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಪಶು ಪಾಲಕ ಹಿಂದುಳಿದ ವರ್ಗದ ಧನಗರ ಗೌಳಿ ಜನಾಂಗದ ಎಷ್ಟು ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲಾಗಿದೆ: (ಗ್ರಾಮವಾರು ಸಂಪೂರ್ಣ ಮಾಹಿತಿ ನೀಡುವುದು)<br>ಉಪಗ್ರಾಮಗಳಾಗಿ ಮಾಡುವ ಹಳ್ಳಿಗಳ ಪ್ರಕ್ರಿಯೆ ಯಾವ ಹಂತದಲ್ಲಿದೆ: (ಸಂಪೂರ್ಣ ಮಾಹಿತಿ ನೀಡುವುದು) | ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಪಶು ಪಾಲಕ ಧನಗರಗೌಳಿ ಜನಾಂಗದ ಒಟ್ಟು 31 ಧನಗರಗೌಳಿ ಹಾಡಿಗಳನ್ನು ಗುರುತಿಸಲಾಗಿದ್ದು, ಅದರಲ್ಲಿ 2 ಹಾಡಿಗಳನ್ನು ಹೊಸದಾಗಿ ಕಂದಾಯ ಗ್ರಾಮಗಳನ್ನಾಗಿ ಹಾಗೂ 9 ಹಾಡಿಗಳನ್ನು ಉಪಗ್ರಾಮಗಳನ್ನಾಗಿ ಮಾಡುವ ಪ್ರಕ್ರಿಯೆಯು ನಿಯಮಾನುಸಾರ ಚಾಲ್ತಿಯಲ್ಲಿರುತ್ತದೆ. (ಗ್ರಾಮವಾರು ಸಂಪೂರ್ಣ ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.) |
| ಊ) | ಧಾರವಾಡ ಜಿಲ್ಲೆಯ ಧನಗರ ಗೌಳಿ ಜನಾಂಗದ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ ಮತ್ತು ಎಷ್ಟು ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ | ಧಾರವಾಡ ಜಿಲ್ಲೆಯಲ್ಲಿ ಕಾಡಿನಂಚಿನಲ್ಲಿ ವಾಸಿಸುವ ಧನಗರಗೌಳಿ ಜನಾಂಗದ 11 ಹಾಡಿಗಳಿವೆ. (ಧಾರವಾಡ-2, ಅಳ್ನಾವರ-5 ಮತ್ತು ಕಲಘಟಗಿ-4) ಸದರಿ ಹಾಡಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿ ಹಕ್ಕುಪತ್ರ ನೀಡುವ ಹಂತದ ವಿವರ<br>1) ಧಾರವಾಡ ತಾಲ್ಲೂಕಿನಲ್ಲಿ ಹುಣಸಿಕುಮರಿ ಕಂದಾಯ ಗ್ರಾಮವನ್ನಾಗಿಸಿ ಹಕ್ಕುಪತ್ರಗಳನ್ನು |

| | | |
|---|---|---|
| | ಮಾಡಲಾಗಿದೆ? (ವಿವರ ನೀಡುವುದು) | ವಿತರಿಸಲಾಗಿದೆ. 2) ಉಡವನಾಗಲಾವಿ ಅರಣ್ಯ ಹಕ್ಕು ಸಮಿತಿಯಿಡಿ ಹಕ್ಕು ಪತ್ರ ವಿತರಣೆ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>2) ಅಳ್ನಾವರ ತಾಲ್ಲೂಕಿನಲ್ಲಿ 1) ಅಂಬೋಳಿ ಕಂದಾಯ ಗ್ರಾಮವನ್ನಾಗಿಸಿ ಹಕ್ಕುಪತ್ರ ವಿತರಿಸಲಾಗಿದೆ. 2) ಕಷ್ಟಗಿರಿ ಉಪಗ್ರಾಮಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ. 3) ಶಿವನಗರ, 4) ಲಿಂಗನಕೊಪ್ಪ ಮತ್ತು 5) ಮಡಕಿಕೊಪ್ಪ ಇವು ಅರಣ್ಯ ಹಕ್ಕು ಸಮಿತಿಯಿಡಿ ಹಕ್ಕು ಪತ್ರ ವಿತರಣೆ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>ಕಲಘಟಗಿ ತಾಲ್ಲೂಕಿನ 1) ಹವಳದ ಹಿಂಡಸಗೇರಿ, 2) ತಂಬೂರ, 3) ಬೈಚವಾಡ ಮತ್ತು 4) ಹುಲಗಿನಕೊಪ್ಪ ಇವು ಕಂದಾಯ ಗ್ರಾಮ ರಚನೆ ಮಾನದಂಡಗಳಿಗೆ ಒಳಪಡುವುದಿಲ್ಲ. |

(ಡಾ. ಜಿ. ಪರಮೇಶ್ವರ)
ಕಂದಾಯ ಸಚಿವರು ಹಾಗೂ
ಉಪಮುಖ್ಯಮಂತ್ರಿಗಳು

ಸಂಖ್ಯೆ : RC-CFS/359/2026
(ಇ – 2266769)